ಹಳ್ಳಿಯ ತುದಿಯ ತನಕ ಅವನನ್ನು ಬೆಂಬಾಲಿಸುತ್ತದೆ.

ಹಳ್ಳಿಯನ್ನು ದಾಟಿ ಪೇಟೆಯ ತನಕ
ಅವನನ್ನು ಹಿಂಬಾಲಿಸುತ್ತದೆ ಇತಿಹಾಸದ ನೋಟ.
ಪೇಟೆ ಸೇರಿದ ಹೈದ ಹೇಗೆ
ತನ್ನ ಇತಿಹಾಸವನ್ನು ಮರೆಮಾಚುತ್ತಾನೆ
ಮತ್ತು ತನ್ನ ಪರಂಪರೆಯನ್ನು
ಗಂಟು ಕಟ್ಟಿ ಬದಿಗಿಡುತ್ತಾನೆ
ಎಂದು ಬೆರಗುಗಣ್ಣಿನಿಂದ ನೋಡುತ್ತದೆ.'

ಹೀಗೆ ಹೋಗುವ ಹುಡುಗ ಇಂದಿನ ಮಹಾನಗರದ ಬಹುದೊಡ್ಡ ಸಮುದಾಯದ ಪ್ರತಿನಿಧಿಯಾಗಿ ಕಾಣಿಸುತ್ತಾನೆ. ಆದರೆ ಪದ್ಯದಲ್ಲಿನ ಹುಡುಗ ಪೇಟೆಗೆ ಹೋಗಿ ಅಲ್ಲಿ ಇನ್‌ಸ್ಟಾಲ್‌ಮೆಂಟಿನಲ್ಲಿ ಹೊಸ ನಡೆ-ನುಡಿ, ಮತ್ತು ಹುಸಿ ವಿಶ್ವಾಸವನ್ನು ಕೊಂಡು ತನ್ನ ಅಸ್ತಿತ್ವದ ಬೇರನ್ನು ಕಳೆದುಕೊಳ್ಳುತ್ತಾನೆ. ಕೊನೆಗೆ ಆ ಇನ್‌ಸ್ಟಾಲ್‌ಮೆಂಟ್ ಕಟ್ಟಲಾಗದೆ ಸೋತು ಸುಣ್ಣವಾಗಿ ಹಳ್ಳಿಗೆ ಮರಳುತ್ತಾನೆ. ಹಳ್ಳಿಯ ನೆಲದ ಮೇಲೆ ಬಿದ್ದು ತನ್ನ ನೆಲವನ್ನು ಅಳೆಯುತ್ತಾನೆ. ಪುರಾತನ ಕಲ್ಲುಗಳ ಶಕ್ತಿ ಸಿಡಿದು ಅವನೊಳಗೆ ಸೇರಿ ಅವನು ಎಚ್ಚರಗೊಳ್ಳುತ್ತಾನೆ. ಇದು ಈ ಪದ್ಯದಲ್ಲಿ ಕಾಣಿಸುವ ಆದಿವಾಸಿ ಹುಡುಗನ ಪಾಡು. ಆದರೆ ನಮ್ಮ ಮಹಾನಗರಗಳಲ್ಲಿ ಇಂದು ಸೇರಿಕೊಂಡಿರುವ ಹಳ್ಳಿಮೂಲದ ಬಹುತೇಕ ತರುಣ ಪೀಳಿಗೆಯ ಪರಿಸ್ಥಿತಿ ಬೇರೆಯೇ ಇದೆ. ಅವರು ತಮ್ಮ ಬೇರುಗಳನ್ನು ಕಳೆದುಕೊಂಡು, ಹೊಸ ಗುರುತುಗಳನ್ನು ಪಡೆದುಕೊಂಡು,ಆಗುರುತನ್ನೂಪೂರ್ತಿಧರಿಸಲಾಗದೆ, ಬೇರನ್ನು ಮರೆಯಲಾಗದೆ ಒದ್ದಾಡುತ್ತಾರೆ. ಆ ಒದ್ದಾಟ 'ಗಿಲ್ಟ್' ಆಗಿ ಬದಲಾಗಿ, ಆ ಗಿಲ್ಟ್ ಧರ್ಮ, ಸಂಸ್ಕೃತಿ, ಜಾತಿಯ ಹೆಸರಿನಲ್ಲಿ ಕ್ರೌರ್ಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ, ವಾಟ್ಸ್ಆ್ಯಪ್ ಗ್ರೂಪ್‌ಗಳಲ್ಲಿ ಎಗ್ಗಿಲ್ಲದೆ ಹರಿಯಲು ತೊಡಗುತ್ತದೆ. ಅದರ ಪರಿಣಾಮವನ್ನು ವಿವರಿಸಬೇಕಾಗಿಲ್ಲ, ಸುತ್ತಲೊಮ್ಮೆ ಕಣ್ತೆರೆದು ನೋಡಿದರೆ ತಿಳಿಯುತ್ತದೆ. ಹಾಗೆ ನೋಡಿದರೆ ಊರಿಗೆ ಮರಳಿ ಅಲ್ಲಿನ ನೆಲದ ಮೇಲೆ ಬಿದ್ದು ಎಚ್ಚರಗೊಳ್ಳುವ ಆದಿವಾಸಿ ಹುಡುಗನೇ ಅದೃಷ್ಟವಂತ; ಆರೋಗ್ಯವಂತ ಕೂಡ!

ಈ ಸಂಕಲನದ 'ಕಣ್ಣೀರಿನ ಪ್ರವಾಹ' ಎಂಬ ಹೆಸರಿನ ಪದ್ಯದ ಸಾಲುಗಳು ಹೀಗಿವೆ:

'ಅದೆಷ್ಟೋ ಸಲ ಕವಿತೆ ಬರೆದಾಗ
ಯಾಕೋ ಗೊತ್ತಿಲ್ಲ
ತಂತಾನಾಗಿ ಕಣ್ಣು ತುಂಬಿ ಬರುತ್ತದೆ.
ಕಂಗಳಿಗೊಂದು ಅಣೆಕಟ್ಟು
ಕಟ್ಟಬೇಕು ಅಂದುಕೊಳ್ಳುತ್ತೇನೆ.
ಹಾಗೆ ಅಂದುಕೊಳ್ಳುತ್ತಿರುವಾಗಲೇ
ಕಣ್ಣೀರು ಕಟ್ಟೆ ಒಡೆದು
ಪ್ರವಾಹವಾಗಿ ನನ್ನನ್ನು ಸುತ್ತುವರಿಯುತ್ತದೆ.
ಮತ್ತು ನಾನು ಹರಿಯುವ ನೀರಿಗೆ
ಸಾಕ್ಷಿಯಾಗಿ ನಿಂತ ಬಂಡೆಯಂತೆ
ತಟಸ್ಥ ನಿಂತುಬಿಡುತ್ತೇನೆ.'

ತನ್ನದೇ ಕಣ್ಣೀರಿನ ಪ್ರವಾಹಕ್ಕೆ ಸಾಕ್ಷಿಯಾಗಿ ನಿಂತ ಬಂಡೆಯಂಥ ಈ ಪದ್ಯಗಳು ಬಂಡೆಯ ಮೇಲೂ ಕೊನರುವಷ್ಟು ಜೀವಂತವೂ ಆಗಿವೆ.

●

## ಜಸಿಂತಾ ಕೆರ್ಕೆಟ್ಟಾರ ಒಂದು ಪದ್ಯ

### ಆಶ್ವಾಸನೆ

ಪುಟ್ಟ ಹಕ್ಕಿಯ ಪುಟ್ಟ ಬೇಡಿಕೆ
ಹೆಚ್ಚೇನಿಲ್ಲ. ಬೆಟ್ಟದ ಮೇಲಿನ ಕಾಡಿನಲ್ಲಿ
ಒಂದು ಕೊಂಬೆ. ಅಷ್ಟೇ.
ಆ ಪುಟ್ಟ ಹಕ್ಕಿಗೆ ಅಲ್ಲಿ
ಭೂಮಿಯ ಅತಿ ಸುಂದರ ಕಲಾಕೃತಿಯನ್ನು
ಹೆಣೆಯುವ ಆಸೆ.

ಆಗ ಆಶ್ವಾಸನೆ ತಬ್ಬಿಬ್ಬಾಗಿ ಆಚೀಚೆ ನೋಡುತ್ತದೆ.
ಅದಕ್ಕೂ ಗೊತ್ತು
ಒಂದು ಪುಟ್ಟ ಹಕ್ಕಿಗಾಗಿ
ಲೋಕವನ್ನು ಉಳಿಸಲಾಗದು.
ಆದರೂ ಲೆಕ್ಕವಿಲ್ಲದಷ್ಟು ಆಶ್ವಾಸನೆಯನ್ನು
ಲೋಕಕ್ಕೆಲ್ಲಾ ಹಂಚುತ್ತದೆ.